■ ಹನಿ



## ಪೂನಂ ಕಿರಿಕ್

ವಿರಾಟ್ ಕೊಹ್ಲಿ ಸಾಕಷ್ಟು ಬೆವರು ಹರಿಸಿ ಪಾಕಿಸ್ತಾನದ ವಿರುದ್ಧ ಕಳೆದ ವಾರ ಭರ್ಜರಿ 183 ರನ್ ಹೊಡೆದ. ಏಷ್ಯಾ ಕಪ್‌ನಲ್ಲಿ ಭಾರತ, ಪಾಕಿಸ್ತಾನ ತಂಡವನ್ನು ಬಗ್ಗುಬಡಿಯಿತು. ಆದರೆ ಈ ಹುಡುಗಿ ಪೂನಂ ಪಾಂಡೆ, ಯಾವುದೇ ಶ್ರಮವಿಲ್ಲದೆ ಬರೀ ಕಿಡಿಗೇಡಿತನದಿಂದ ವಿರಾಟ್ ಹೆಸರಿಗೆ ಮಸಿ ಬಳಿದಿದ್ದಾಳೆ! ತನ್ನ ಅರೆಬೆತ್ತಲೆ ಚಿತ್ರಗಳನ್ನು ಟ್ವಿಟರ್‌ನಲ್ಲಿ ಪ್ರದರ್ಶಿಸುತ್ತಾ ಸುದ್ದಿ ಮಾಡುತ್ತಿರುವ ಮಾಡೆಲಿಂಗ್ ಹುಡುಗಿ ಪೂನಂ ಪಾಂಡೆ, ಟ್ವಿಟರ್‌ನಲ್ಲಿ ಏರಿಸಿದ ಹೊಸ ಚಿತ್ರ ಕೋಲ್ಕತ್ತಾದಲ್ಲಿ ಭಾರೀ ಕೋಲಾಹಲವನ್ನೇ ಉಂಟು ಮಾಡಿತು. 'ಭಾರತೀಯ ದೇವತೆ ವಿಷ್ಣುವಿನ ಚಿತ್ರವೊಂದರ ಮುಂದೆ ಪಾಕಿಸ್ತಾನದ ಆಟಗಾರ ಬಗ್ಗಿ ಕೈಮುಗಿಯುವ' ಚಿತ್ರವೊಂದನ್ನು ಈಕೆ ಟ್ವಿಟರ್‌ನಲ್ಲಿ ಏರಿಸಿ, ಅದರ ಕೆಳಗೆ 'ಐ ಲವ್ ಯೂ ವಿರಾಟ್. ನಿನಗೆ ನನ್ನ ಚುಮ್ಮ....' ಎಂದು ಬರೆದಿದ್ದಾಳೆ. ಈ ಚಿತ್ರ ಮತ್ತು ಸುದ್ದಿಯನ್ನು 'ದಿ ಟೆಲಿಗ್ರಾಫ್' ಪತ್ರಿಕೆ ಪ್ರಕಟಿಸಿದ್ದೇ ಕೋಲ್ಕತ್ತಾದ ಸಾವಿರಾರು ಮುಸ್ಲಿಮರು ಬೀದಿಗಿಳಿದು ರಸ್ತೆ ತಡೆ ನಡೆಸಿದ್ದಾರೆ. ಆರು ಗಂಟೆ ಕಾಲ ಕೋಲ್ಕತ್ತಾ ಪೂರ್ತಿ ಅಸ್ತವ್ಯಸ್ತವಾಗಿತ್ತು. ಕೊನೆಗೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಬಹಿರಂಗವಾಗಿ ಇದನ್ನು ಖಂಡಿಸಿ, ಎಲ್ಲರಿಗೂ ಎಸ್‌ಎಂಎಸ್ ಕಳಿಸಿ, ಮತೀಯ ಗಲಭೆಯಾಗದಂತೆ ಹರಸಾಹಸ ಪಡಬೇಕಾಯಿತು.

2010ರಲ್ಲಿ ಈ ಹುಡುಗಿ ಯಾರೆಂದೇ ಗೊತ್ತಿರಲಿಲ್ಲ. 2011ರಲ್ಲಿ 'ಭಾರತ ವಿಶ್ವಕಪ್ ಗೆದ್ದರೆ ಮೈದಾನದಲ್ಲಿ ಭಾರತೀಯ ಆಟಗಾರರ ಎದುರು ಬೆತ್ತಲೆಯಾಗುತ್ತೇನೆ' ಎಂದು ಈಕೆ ಘೋಷಿಸಿದ್ದೇ ರಾತೋರಾತ್ರಿ ಈಕೆ ಪ್ರಸಿದ್ಧಳಾಗಿಬಿಟ್ಟಳು. ದೆಹಲಿಯಲ್ಲಿ ಖುದ್ದು ನ್ಯಾಯಾಲಯದ ಆದೇಶದ ಮೇರೆಗೆ ಹಾಗೂ ಮುಂಬೈಯಲ್ಲಿ ಬಿಜೆಪಿ ಮಹಿಳಾ ಮೋರ್ಚಾ ನೀಡಿದ ದೂರಿನ ಮೇರೆಗೆ ಈಕೆಯ ವಿರುದ್ಧ ಎರಡು ಕೇಸುಗಳು ದಾಖಲಾದವು. ಆದರೆ ಈಕೆ ಬೆತ್ತಲೆ ವಾಗ್ದಾನದಿಂದ ಹಿಂದೆ ಸರಿದಳು. 'ಬಿಸಿಸಿಐ ನನಗೆ ಅನುಮತಿ ನೀಡುತ್ತಿಲ್ಲ. ಅದಕ್ಕೇ ನಾನು ಬೆತ್ತಲಾಗುವುದಿಲ್ಲ' ಎಂದಳು!

21ರ ಹರೆಯದ ಈ ಬಿಚ್ಚೋಟದ ಮಾಡೆಲ್ (ಬರ್ತ್‌ಡೇ 11-4-1991) ಕಳೆದ ವಾರ ಸಂದರ್ಶನವೊಂದರಲ್ಲಿ 'ಭಾರತದಲ್ಲಿ ನೀಲಿ ಚಿತ್ರಗಳನ್ನು ಕಾನೂನುಬದ್ಧ ಮಾಡಬೇಕು. ಸಿನಿಮಾ ಮಂದಿರಗಳಲ್ಲಿ ಬ್ಲೂಫಿಲಂಗಳನ್ನು ಪ್ರದರ್ಶಿಸಬೇಕು. ಯಾರಿಗೂ ಓಪನ್ ಆಗಿ ನೀಲಿಚಿತ್ರಗಳನ್ನು ನೋಡುವ ತಾಖತ್ತಿಲ್ಲ. ಕದ್ದು ಮುಚ್ಚಿ ಎಲ್ಲರೂ ನೋಡ್ತಾರೆ. ನಮ್ಮದು ಹೊಸ ಪೀಳಿಗೆ. ಓಪನ್ ಆಗಿ ನೋಡಿದರೆ ತಪ್ಪೇನು?' ಎಂದು ವಾದಿಸಿದ್ದಾಳೆ. ಹಾಲಿವುಡ್‌ನ ನೀಲಿಚಿತ್ರಗಳ ನಾಯಕಿ ಸನ್ನಿ ಲಿಯೋನೆ ಭಾರತಕ್ಕೆ ಬಂದು ಈಗ ಹಿಂದಿ ಚಿತ್ರ ಜಿಸ್ಮ್-2 ನಲ್ಲಿ ನಟಿಸಿರುವುದನ್ನೂ ಈಕೆ ಸಮರ್ಥಿಸಿದ್ದಾಳೆ. 2011ರಲ್ಲಿ ಇಂಗ್ಲೆಂಡ್ ವಿರುದ್ಧ ಕ್ರಿಕೆಟ್ ಸರಣಿಯಲ್ಲಿ ಭಾರತ ಗೆಲ್ಲಬೇಕೆಂದು ಈಕೆ ತನ್ನ ಬಿಕಿನಿ ಚಿತ್ರಗಳನ್ನು ಟ್ವಿಟರ್‌ನಲ್ಲಿ ಲೋಡ್ ಮಾಡಿದರೂ ಭಾರತ ಸೋಲುವುದರಿಂದ ತಪ್ಪಿಸಿಕೊಳ್ಳಲು ಆಗಲಿಲ್ಲ!

'ಏನೋ ತಲೆಗೆ ಬಂದಂತೆ ಮಾತಾಡ್ತಿದಾಳೆ' ಎಂದು ಜನ ಸುಮ್ಮನಿರುವಂತಿಲ್ಲ. ಈಕೆಯ ಕಿರಿಕ್ ಹೆಚ್ಚುತ್ತಲೇ ಇದೆ. 2011ರಲ್ಲಿ ಯುವಜನರು ಅತ್ಯಂತ ಹೆಚ್ಚು ಗೂಗಲ್‌ನಲ್ಲಿ ಸರ್ಚ್ ಮಾಡಿರುವುದು ಈಕೆಯದೇ ಹೆಸರಂತೆ!

## ಚಾಪ್ಲಿನ್ ಮೊಮ್ಮಗಳು

ಜಗವನ್ನೇ ನಗಿಸಿ, ಅಳಿಸಿದ ಚಾರ್ಲಿ ಚಾಪ್ಲಿನ್‌ನ ಮೊಮ್ಮಗಳು ಇತ್ತೀಚೆಗೆ ಕೋಲ್ಕತ್ತಾಗೆ ಬಂದು ಹೋದಳು. ಕೀರಾ ಸನ್‌ಶೈನ್ ಚಾಪ್ಲಿನ್ ಎನ್ನುವುದು ಆಕೆಯ ಹೆಸರು. ಚಾಪ್ಲಿನ್‌ನ ಐದನೇ ಮಗಳು ಯೂಜಿನ್ ಚಾಪ್ಲಿನ್‌ನ ಮಗಳೀಕೆ. ಸದ್ಯಕ್ಕೆ ವಿಶ್ವದ ಏಳನೇ ಅತ್ಯಂತ ಸೆಕ್ಸೀ ಮಹಿಳೆ! 2010ರಲ್ಲಿ ವಿಶ್ವದ 'ಸ್ಟೈಲ್ ಐಕಾನ್' ಎಂದು ಈಕೆಯನ್ನು ಗುರುತಿಸಿ ಪತ್ರಿಕೆಯೊಂದು ಬಿರುದು ನೀಡಿತ್ತು. ಮಾಡೆಲಿಂಗ್, ಟೀವಿ ಮತ್ತು ಸಿನಿಮಾ ನಟನೆಗಳಲ್ಲಿ ಬ್ಯುಸಿಯಾಗಿರುವ ಕೀರಾ, ಹಲವಾರು ಉದ್ಯಮಗಳಲ್ಲೂ ಬಂಡವಾಳ ಹೊಂದಿದ್ದಾಳೆ. ಹಾಲಿವುಡ್‌ನ ಖ್ಯಾತ ಚಿತ್ರನಿರ್ಮಾಣ ಸಂಸ್ಥೆ 'ಲೈಮ್‌ಲೈಟ್ ಪ್ರೊಡಕ್ಷನ್'ನಲ್ಲಿ ಈಕೆ ಶೇಕಡಾ 30ರಷ್ಟು ಪಾಲು ಬಂಡವಾಳ ಹೊಂದಿದ್ದಾಳೆ.

ಈಕೆ ನಟಿಸಿರುವ 'ಚೌರಾಹೆನ್' ಎಂಬ ಭಾರತೀಯ ಇಂಗ್ಲಿಷ್ ಚಿತ್ರವೊಂದು ಈ ತಿಂಗಳು ಸದ್ದಿಲ್ಲದೆ ಬಿಡುಗಡೆಯಾಗಿ ಕಣ್ಮರೆಯಾಗಿದೆ. ಬಿಡುಗಡೆಗೂ ಮುನ್ನವೇ ಅದರ ನಿರ್ದೇಶಕ ರಾಜಶ್ರೀ ಓಝಾ 'ಈ ಚಿತ್ರ ಓಡುವುದಿಲ್ಲ ಎನ್ನುವುದು ಗೊತ್ತಿದೆ' ಎಂದಿದ್ದ. ಅದಕ್ಕೆ ಕೀರಾ ಒಬ್ಬಳೇ ಕಾರಣವಲ್ಲ. ಈ ಚಿತ್ರದಲ್ಲಿ ಬಾಲಿವುಡ್‌ನ ಸೋಹಾ ಅಲಿಖಾನ್, ಜೀನತ್ ಅಮಾನ್, ವಿಕ್ಟರ್ ಬ್ಯಾನರ್ಜಿ, ರೂಪಾ ಗಂಗೂಲಿ ಮುಂತಾದ ಖ್ಯಾತ ನಟ-ನಟಿಯರೂ ಇದ್ದರು. ಇವರೆಲ್ಲ ಇದ್ದೂ ಚಿತ್ರ ಸೋಲಲು ಕಾರಣವೇನು ಎನ್ನುವುದು ಕೀರಾಗೂ ಗೊತ್ತಾಗಲಿಲ್ಲವಂತೆ. 'ಕೋಲ್ಕತ್ತಾ ನೋಡಬೇಕು ಎಂಬುದು ಬಹಳ ವರ್ಷಗಳ ಆಸೆ. ಅದಕ್ಕೆಂದೇ ನಾನು ಈ ಚಿತ್ರದಲ್ಲಿ ಯಾವುದೇ ಸಂಭಾವನೆ ಪಡೆಯದೆ ನಟಿಸಿರೋದು' ಎಂದು ಕೀರಾ ತನ್ನ ಭಾರತಪ್ರೇಮವನ್ನು ಪ್ರಕಟಿಸಿದ್ದಾಳೆ.

16ರ ಹರೆಯದಿಂದಲೇ ವೃತ್ತಿಪರ ಮಾಡೆಲ್ ಆಗಿ ಬೆಳೆದ ಐರಿಶ್ ಸಂಜಾತೆ ಕೀರಾ, ಅಜ್ಜನ ಎಸ್ಟೇಟ್ ಇದ್ದ ಸ್ವಿಝರ್ಲಂಡನ್ನು ಬಾಲ್ಯದಲ್ಲೇ ತೊರೆದು ಹಾಲಿವುಡ್ ಸೇರಿದವಳು. ಈ ಹಿಂದೆ 2005ರಲ್ಲಿಯೂ ಈಕೆ 'ಯತ್ನ' ಎಂಬ ಬಾಲಿವುಡ್ ಚಿತ್ರದಲ್ಲಿ ನಟಿಸಿದ್ದಳು. ಆದರೆ ಅದೂ ಸುದ್ದಿ ಮಾಡಲಿಲ್ಲ. ಕಳೆದ ವರ್ಷ ತೆರೆಗೆ ಬಂದ ಹಾಲಿವುಡ್‌ನ 'ಇಂಟೆರ್ನೊ ಜಿಯೆರ್ನೊ' ಚಿತ್ರ ಈಕೆಗೆ ಹೆಸರು ತಂದುಕೊಟ್ಟಿತ್ತು. ಆಸ್ಪ್ರೆ, ಅರ್ಮಾನಿ ಎಕ್ಸ್‌ಚೇಂಜ್, ಟಾಮಿ ಹಿಲ್‌ಫಿಗರ್ ಮುಂತಾದ ಉತ್ಪನ್ನಗಳ ಮಾಡೆಲಿಂಗ್ ಹಾಗೂ ರಾಯಭಾರಿಯಾಗಿರುವ ಈಕೆ ಮಾಡೆಲಿಂಗ್ ಲೋಕದಲ್ಲಂತೂ ದೊಡ್ಡ ಹೆಸರು.



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65